Regd. No M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 270 | ಸೋಮವಾರ 23—6—47 | ಬಿಡಿ ಪ್ರತಿ ೧ ಪೈ

ಈ ವಾರದ ಭವಿಷ್ಯ

(ಓಂ ಜೋತಿಷ್ಯರಿಂದ)

ಮೇಷ— ಶತ್ರುವೃದ್ಧಿ, ವ್ಯಾಪಾರ ನೌಕರಿಗಳಲ್ಲಿ ತೊಂದರೆ, ನಿರುದ್ಯೋಗ ಭಯ, ಬೇಸರಿಕೆ.

ವೃಷಭ— ಲಾಭ ಬರುವ ಅದೃಷ್ಟ ವಿದೆ, ಆರೋಗ್ಯ ಉತ್ತಮ ಕೈಗೊಂಡ ಕಾರ್ಯಗಳಲ್ಲಿ ಅನುಕೂಲ.

ಮಿಥುನ — ಹೆಚ್ಚು ಆಶೆಗೆ ಹೋದಲ್ಲಿ ಅಸರ್ಥವಾಗಬಹುದು, ವ್ಯವಹಾರದಲ್ಲಿ ಕಷ್ಟ ಪ್ರಾಪ್ತಿ, ಧನಹಾನಿ. ಆಲಸ್ಯ.

ಕಟಕ — ಇಷ್ಟಾರ್ಥಸಿದ್ಧಿಯು ನೆಂಬೇರುವುದು, ವ್ಯಾಪಾರದಲ್ಲಿ ಲಾಭ ದಾನ ಧರ್ಮದಲ್ಲಿ ಮನಸ್ಸು ಹೋಗುತ್ತದೆ. ಸುಖ ಭೋಜನ ಪ್ರಾಪ್ತಿ.

ಸಿಂಹ — ಧನಲಾಭವುಂಟು. ವ್ಯವಹಾರದಲ್ಲಿ ಜಯ ಪ್ರಾಪ್ತಿ. ಗೃಹ ಕೃತ್ಯಗಳ ಸಂಬಂಧವಾದ ಮನಸ್ತಾಪ.

ಕನ್ಯ — ನವಚೇತನದೊಂದಿಗೆ ಕಾರ್ಯ ಮಾಡಿ ಒಳ್ಳೇ ಸಂಪಾದನೆ ಮಾಡುವಿರಿ. ಆರೋಗ್ಯವು ಉತ್ತಮವಿರುತ್ತದೆ. ಸರ್ವತೋಮುಖವಾಗಿ ಸುಖ ಪ್ರಾಪ್ತಿ.

ತುಲ — ಲಕ್ಷ್ಮೀ ಕಟಾಕ್ಷವಿದೆ ಕಾರ್ಯ ಜಯವಿದೆ, ಮರ್ಯಾದೆಯು ಲಭಿಸಲಿದೆ, ಉದ್ಯೋಗದಲ್ಲಿ ಗೆಲುವು. ಪ್ರವಾಸದಲ್ಲಿ ಅನುಕೂಲ.

ವೃಶ್ಚಿಕ — ಧನ ನಷ್ಟ ಅಪವಾದ ಉತ್ತರವಾದವಲ್ಲ ನಿವಾರಣೆ.

ಧನಸ್ಸು — ಶತ್ರುಭಯ, ಗೃಹದಲ್ಲಿ ಮನಸ್ತಾಪಗಳು, ವ್ಯವಹಾರದಲ್ಲಿ ಕಷ್ಟ ಪ್ರಾಪ್ತಿ.

ಮಕರ — ನೆನಸಿದ ಕಾರ್ಯಗಳು ಈಡೇರುವುವು. ಧನಲಾಭವಿದೆ. ವ್ಯವಹಾರದಲ್ಲಿ ಜಾಗರೂಕತೆಯು ಅವಶ್ಯಕವಿದೆ

ಕುಂಭ — ಹಿಂದೆ ಸರಿದಿದ್ದ ನೀವು ಮುಂಜರಿಯುವಿರಿ. ಜಟುವಟಿಕೆಯೊಡನೆ ಕಾರ್ಯಗಳನ್ನು ಮಾಡುವಿರಿ, ವ್ಯವಹಾರದಲ್ಲಿ ಸಂತೋಷವುಂಟು.

ಮೀನ — ಧನಲಾಭವುಂಟು. ಇಷ್ಟ ಸಿದ್ಧಿ ಪ್ರಾಪ್ತಿ. ಸುಖ ಭೋಜನ ಮಾನಮರ್ಯಾದೆಗಳು ಲಭಿಸುವವು.

ಭಾರತ ಪ್ರಜಾ ಪ್ರಭುತ್ವಕ್ಕೆ ಮೌಲಾನಾ ಅಜಾದ್ ಕಲಾಮರು ಪ್ರಥಮ ಅಧ್ಯಕ್ಷರಾಗುವರೆಂದೂ ಇದು ಗಾಂಧೀಜೀ ಸೂಚನೆಯಾಗಿದ್ದು ಪಂ|| ನೆಹರೂ ಬೆಂಬಲವಿದೆಯೆಂದೂ ಎ. ಬಿ. ಪತ್ರಿಕೆಯು ಹೇಳಿದೆ.

ವರ್ತಮಾನ ಸಂಗ್ರಹ

ಕರಾಚಿ ಬೀದಿಗಳಲ್ಲಿ ಅಂದವಾದ ಚೀಲಗಳಲ್ಲಿ ವಿಷ ಮಿಶ್ರಿತವಾದ ಸಿಹಿ ತಿಂಡಿಯು ಜೀಪ್‌ಗಳಿಂದ ಹಂಚಲಾಗುತ್ತಿದ್ದ ವಿಚಾರವು ಪೋಲೀಸರಿಗೆ ವರದಿಯಾಗಿದೆಯೆಂದೂ ಪೋಲೀಸರು ಅಂತಹ ಸಿಹಿ ತಿಂಡಿಯನ್ನು ಪರಿಶೋಧನೆಗೆ ಕಳುಹಿಸಿರುವರೆಂದೂ ತಿಳಿಯುಬಂದಿದೆ.

೦ ೦

ಲಾಹೋರನ್ನು ವಿಭಜನೆ ಸಂಬಂಧವಾಗಿ ಅಸೇಕರು ಬಿಟ್ಟು ಹೊಡುತ್ತಿದ್ದಾರೆ. ಪಟ್ಟಣ ಪಾಳು ಪಾಳಾಗುತ್ತಿದೆ. ಅಲ್ಲಿ ಮನೆ ಮಠ ಖರೀದಿ ಇಳಿಯುತ್ತಿದೆಯಂತೆ.

೦ ೦

ಹಾವು ಕಡಿದ ವಿಚಾರವನ್ನು ತಂತೀ ವಾರ್ತಾಲಕ ತಿಳಿಸಿದೊಡನೆ ಗುಣಪಡಿಸುತ್ತಿದ್ದ ಹುಣಸೂರಿನಲ್ಲಿದ್ದ ಸಬ್ ಪೋಸ್ಟ್ ಮಾಸ್ಟರ್ ಶ್ರೀ ಡಿ. ಕೆ. ರಾಮು ಚಂದ್ರಯ್ಯನವರು ಮಳವಳ್ಳಿಗೆ ವರ್ಗಾಯಿಸಲ್ಪಟ್ಟಿರುವರೆಂದು ತಿಳಿಯುಬಂದಿದೆ.

ವುಡ್‌ಲ್ಯಾಂಡ್ಸ್

ತಾ|| 22-6-47 ರಿಂದ

ಜನಭರಿತವಾದ 8 ನೇ ವಾರ

ಪ್ರತಿದಿನ 3 ಆಟಗಳು

* ಟಿ.ಆರ್. ಮಹಾಲಿಂಗಂ
* ಬಿ. ಆರ್. ಪಂತಲು
* ಸಾರಂಗಪಾಣಿ
* ಬೇಬಿ ಕಮಲ

ಪಾತ್ರವಹಿಸಿರುವ

ನಾವು ಇಬ್ರು ಬಿ

(ತಮಿಳು)

ಲಾಹೋರಿನಲ್ಲಿ ಭಾರಿ ಅಗ್ನಿ ಪ್ರಕರಣ

ಲಾಹೋರ್ ಜೂನ್ 22 — ನಿನ್ನೆ 46 ಅಗ್ನಿ ಪ್ರಮಾದದ ವರದಿಯಾಗಿದೆ. 150 ಮನೆಗಳು ಸುಟ್ಟು ಹೋದವು. ರಾತ್ರೆಯಲ್ಲಾ ಉರಿಯುತ್ತಿದ್ದ ಮನೆಗಳ ಜ್ವಾಲೆಯು ಜೋರಿಗಾಗಿದ್ದ ಅನೇಕ ವೈಲಿಗಳವರಿಗೂ ಕಾಣುತ್ತಿತ್ತು. ಹೊಗೆಯು ಎಲ್ಲ ಕಡೆ ಅವರಿಸಿತ್ತು.

ಪಾಕಿಸ್ಥಾನಕ್ಕೆ ಸ್ಥಾನವಿಲ್ಲ

ವಾಷಿಂಗ್‌ಟನ್ ಜೂನ್ 21 — ಅರಬ್ ಲೀಗಿಗೆ ಪಾಕೀಸ್ಥಾನವು ಸೇರಲಾಗುವುದಿಲ್ಲವೆಂದು ಅರಬ್ ಲೀಗ್ ಸೆಕ್ರೆಟರಿ ಜನರಲ್ ತಿಳಿಸಿದ್ದಾರೆ.

೨ ರಾಜ್ಯಾಂಗ ಸಭೆಗೂ

ಕಲ್ಕತ್ತಾ ಜೂನ್ 21 — ವಿಭಜನೆಯು ತೀರ್ಮಾನವಾದುದರಿಂದ, ಪಶ್ಚಿಮ ಮತ್ತು ಪೂರ್ವ ಬಂಗಾಳಾ ಪ್ರಾಂತ್ಯ ಶಾಸನ ಸಭೆಯಿಂದ ಇಂಡಿಯಾ ರಾಜ್ಯಾಂಗ ಸಭೆಗೂ ಮತ್ತು ಪಾಕೀಸ್ತಾನ ರಾಜ್ಯಾಂಗ ಸಭೆಗೂ ಸದಸ್ಯರನ್ನು ಚುನಾಯಿಸಲು ಗ್ವರ್ನರರು ತಿಳಿಸಿರುವರು.

ರೇಷ್ಮೆ ಖೋತಾ

ಬೆಂಗಳೂರು ಜೂ 21 — ಜೂನ್ 25 ರಿಂದ ಜನರಿಗೆ ಕೊಡತಕ್ಕ ರೇಷ್ಮೆ ಪ್ರಮಾಣವನ್ನು ಒಟ್ಟು 10 ಔನ್ಸಿಗೆ ಇಳಿಸಲಾಗಿದೆ. ಶ್ರಮ ಜೀವಿಗಳಿಗೆ 14 ಔನ್ಸು.

——

ಚಿಕಾಗೋದಲ್ಲಿ 6 ಸಾವಿರ ಮಂದಿ ಅಜ್ಜಿಯರು ಒಂದು ಕ್ಲಬ್ ಮಾಡಿಕೊಂಡಿದ್ದಾರೆ ಅವರಿಗೆ ಸೊಸೆಯರ ಕಾಟ ಅರಚುವ ಮಕ್ಕಳ ಗೋಳು, ತುಂಬಿ ತುಂಬಿದ ಆಹಾರದ ತಟ್ಟೆಗಳು ಬೇಕಾಗಿಯುಂಟೆ.

ಧ. ಯು. ಸ, ಬುಲೆಟಿನ್

ಪ್ರ.— ರಾಜಾ ಎಸ್. ಗ.ರಾಜಾ ಚಾರ್ಯ, ಅಖಿಲ ಕರ್ನಾಟಕ ಸನಾತನಿಗಳ ಸಂಘ, ಮಂತ್ರಾಲಯ.

ಮಿ|| ಜಿನ್ನಾರ ಮೇಲೆ ಅಲ್ಪಮೇಟಂ !

ದೆಹಲಿ ಜೂ 8— ಮುಸ್ಲಿಂ ಬಹು ಸಂಖ್ಯಾಕ ಪ್ರದೇಶದಲ್ಲಿ ಹಿಂದೂಗಳ ಸಂರಕ್ಷಣೆ ಹಿತರಕ್ಷಣೆ ಬಗ್ಗೆ ಯೋಗ್ಯ ಆಶ್ವಾಸನವನ್ನು ಮಿ || ಜನಾಬ್ ಜಿನ್ನಾ ಸಾಹೇಬರು ಕೊಡಬೇಕು. ಸನಾತನಿಗಳ ಈ ಕೇಳಿಕೆಗೆ ಸದುತ್ತರ ಕೊಡದಿದ್ದಲ್ಲಿ ಶ್ರೀ ಜಿನ್ನರ ಮನೆಯು ಮುಂದೆ ಅಖಂಡ ಸತ್ಯಾಗ್ರಹ ಹೂಡುವುದಾಗಿ ಅ || ಭಾ || ಧರ್ಮ ಸಂಘವು ಎಚ್ಚರಿಕೆ ಕೊಟ್ಟಿದೆ ಎಂದು 'ಗ್ಲೋಬ್' ಪತ್ರಿಕೆಯು ತಿಳಿಸುತ್ತದೆ

ಸೆಕ್ರಟರಿಯೇಟ್ ಭವನದ ಮೇಲೆ ಧರ್ಮ ಧ್ವಜ !

ದೆಹಲಿ— ಮೇ 26 ರಿಂದ 30—5—47 ರವರೆಗೆ 163 ಜನ ಧರ್ಮವೀರರು ಸತ್ಯಾಗ್ರಹ ಮಾಡಿ ಬಂಧಿತರಾದರು. ಈ ಗುಂಪಿನಲ್ಲಿ ಶ್ರೀ ತಿವದಾಸ ಸೈಲಾನಚೀಯವರು 29 ನೇ ತಾರೀಖು ಬಹು ಧೈರ್ಯದಿಂದ ಸೆಕ್ರೆಟರಿಯೇಟ್ ಭವನದ ಮೇಲೆ ಧರ್ಮ ಧ್ವಜವನ್ನು ಹಾರಿಸಿದರು. ಅವರನ್ನು ಕೂಡ್ಲೆ ದಸ್ತಗಿರಿ ಮಾಡಿ ಧ್ವಜವನ್ನು ಕಿತ್ತುಹಾಕಿದರು.

ಹಿಂದೂಗಳೆಂದಿಗೂ ಮಾತೃಭೂಮಿಯನ್ನು ಖಂಡಿಸಲು ಬಿಡಲಾರರು

ಶ್ರೀ ಸ್ವಾಮಿ ಕರಪಾತ್ರಜೀಯವರು ದೆಹಲಿಯ ಪ್ರಚಂಡ ನಾಗರೀಕ ಸಭೆಯ ಮುಂದರಲ್ಲಿ ಮಾತನಾಡುತ್ತಾ 'ಹಿಂದೂಗಳು ಮಾತೃಭೂಮಿಯನ್ನು ಏಂದಿಗೂ ಖಂಡಿಸಲು ಒಪ್ಪಲಾರರು.' ಮತ್ತು ಅವರು ಹೇಳಿದ್ದೇನೆಂದರೆ ಕೆಲ ಲೀಗಿನ ಮುಖ್ಯಸ್ಥರು ಶ್ರೀ ಮಾಧವಾಚಾರ್ಯ ಶಾಸ್ತ್ರಿಯವರನ್ನು ಕಂಡು ಧರ್ಮ ಸಂಘವು ಅಖಂಡ ಭಾರತದ ಬೇಡಿಕೆಯನ್ನು ವಾಪಸ್ ತೆಗದುಕೊಂಡಲ್ಲಿ ಪಾಕಿಸ್ತಾನದಲ್ಲಿ ಗೋವಧೆಯನ್ನು ನಿಲ್ಲಿಸುತ್ತೆವೆಂದು ಹೇಳಿದರು. ನಾವು ಅವರಿಗೆ ಅದು [illegible] ವಿಲ್ಲವೆಂದೂ, ಮುಸಲ್ಮಾನರು [illegible] ವುದರಿಂದ [illegible] ನಮೋ [illegible]

ಕಪಿ ಚೇಷ್ಟೆಗಳು

ಸ್ವರಾಜ್ಯವನ್ನು ಪ್ರಸಾದಿಸಬೇಕಾದ ಪಾಶ್ಚಾತ್ಯರಿಗೆ ನಮ್ಮಲ್ಲಿಯ ಲೋಪಗಳನ್ನು ಗುರ್ತಿಸುತ್ತಿರುವಿಕೆಯೇ ಕರ್ತವ್ಯವಾಗಿದೆ. ಈಗಿನ ನಮ್ಮ ಕಾಂಗ್ರೆಸ್ ನಾಯಕರು ' ಹೌದು ಹೌದು ' ಎಂದು ತಲೆ ಬಾಗುವದು ಇವರ ಕರ್ತವ್ಯವಾಗಿದೆ. ಕೇಳಿ ! ನಿಮ್ಮ ವರ್ಣಾಶ್ರಮ ಧರ್ಮಗಳು ನೆಟ್ಟಗಿಲ್ಲವೆಂದು ಅವರನ್ನುವರು. ಹಾಗಾದಲ್ಲಿ ಅವನ್ನು ನಿರ್ಮೂಲಗೊಳಿಸುವದಾಗಿ ನಮ್ಮವರು ಹೇಳುವರು. ಅಯ್ಯೋ ! ದೇಶದಲ್ಲಿ ವಿಧವೆಯರಿರುವಿಕೆಯೇ ? ಎಂದು ಅವರನ್ನುವರು. ಕುಯ್ಯೋ ! ವಿಧೆಯರನ್ನು ಸಧವೆಯರನ್ನಾಗಿ ಮಾಡುವದಾಗಿ ನಮ್ಮವರು ಹೇಳುವರು. 20 ನೆಯ ಶತಾಬ್ದದಲ್ಲಿ ಇನ್ನೂ ಬಾಲ್ಯ ವಿವಾಹಗಳೇ ? ಎಂದು ಅವರು ಇಗೋ ಈಗಲೇ ಶಾಸನವನ್ನು ಮಾಡುವೆವು ಎಂದು ನಮ್ಮವರು. ಅಸ್ಪೃಶ್ಯತೆಯು ಒಳ್ಳಿತಲ್ಲವೆಸೆದು ಅವರು, ಅಸ್ಪೃಶ್ಯತೆಯ ತೂಲಗಿಸಿ ಕೂಳ್ಳಲಿರುವದಾಗಿ ನಮ್ಮವರು. ವಿಗ್ರಹಾರಾಧನೆ ಏನು ನಾರ್ಸೆಸು ಎಂದು ಅವರು ಅಣಕಿಸುವರು. ನಮಿಗೆ ತಿಳಿಯದು. ಹಾಗಾದಲ್ಲಿ ಗುಡಿಗಳನ್ನು ಬಿಟ್ಟು ಬಿಡುತ್ತೇವೆ. ' ಎಲೈ ದೇವರೇ ' ಎಂದು ನಿಮ್ಮಂಕೆಯೇ ನಡಿಯುವೆವೆಂದು ನಮ್ಮವರ ಉತ್ತರ. ಅತೀವ್ರದಲ್ಲಿ ಹೆಂಗಸರ ಘೋಷಾ ಏನಯ್ಯ ಎಂದು ಅವರ ಹಾಸ್ಯ ಸ್ತ್ರೀಯರನ್ನು ಹೊರಕ್ಕೆ ತಂದು ನಾಟ್ಯವಾಡಿಸುವದಾಗಿ ಇವರ ಉತ್ತರ. ಸಂತಾನವು ಅನಂತವಾದಲ್ಲಿ ಸ್ವರಾಜ್ಯವನ್ನು ಹೇಗೆ ನಿರ್ವಹಿಸುವಿರಿ ಎಂದು ಅವರು ದಬಾಯಿಸುವರು. ಆ ಸಂತಾನ ನಿರೋಧ ಮಾರ್ಗವನ್ನು ಕೂಡ ನಿಮ್ಮಿಂದಲೇ ಕಲಿತು ಕೊಳ್ಳುವೆವು ಎಂದು ನಮ್ಮವರು. ಈ ಬಗೆಯಲ್ಲಿ ಸ್ವರಾಜ್ಯ ಅರ್ಹತೆಗೆ ಬಿಳಿಯ ದೊರೆಗಳು ನೋಡಿಸುವ ಅತಂಕಗಳು ನಿರಾತಂಕಗಳೆಂದು ನಮ್ಮ ಕಾಂಗ್ರೆಸ್ಸು ಮಹಾನಾಯಕರೂ ಸಿದ್ಧಪಡಿಸಲಾದಿತೆ ಬಿಳಿಯ ದೊರೆಗಳನ್ನು ಸಂತೋಷಗೊಳಿಸುವಂತೆ ಮಾಡುವಿಕೆಯೂ, ಅಸುರಿಸುವಿಕೆಯೂ ತನ್ಮೂಲವಾಗಿ ಸಂಪೂರ್ಣ ಸ್ವರಾಜ್ಯವು ಸಿದ್ಧಿಸುವದೆಂಬ ಭಾವಿಸಂಪತ್ತಿಯೂ ಮರ್ಕಟದ ಅನುಕರಣೆಯಿಲ್ಲದೆ ಹೋಗುವದೇ ? ನಮ್ಮ ನಾಯಕರ ಶರೀರವು ಭಾರತೀಯವೇ ಆಗಲಿ, ಮನಸ್ಸು ವಿದ್ಯೆ ನಡವಳಿ, ಊಟ ಗೀಟ ಎಲ್ಲಾ ಬಿಳೀ ದೊರೆಗಳ ಸಂಪತ್ತೇ ಆದದ್ದ[illegible]ವರು ಆಡಿಸಿದಂತ[illegible]ತ್ತಾ ಭಾರತ [illegible] ಮಾಡು [illegible]ೀ ನಿ [illegible]ತಿ.

ಭಾರತದ ಹಣ . ಮುಳುಗುವದೇ ?

ಕಳೆದ ಮಹಾಯುದ್ಧ ಕಾಲದಲ್ಲಿ ಭಾರತವು ಬ್ರಿಟನ್ನಿಗೆ ನೀಡಿದ ಧನ ಸಹಾಯವು ಅದನ್ನು ಶತ್ರುಗಳಿಂದ ಉಳಿಸಲು ಬಹುಮಟ್ಟಿಗೆ ಸಹಾಯವಾಯಿತೆಂಬ ಮಾತು ನಿರ್ವಿವಾದವಾದುದು. ಇಂಗ್ಲೆಂಡವು ಭಾರತಕ್ಕೆ 1200ದಶ ಲಕ್ಷ ಪೌಂಡುಗಳ ಸಾಲವನ್ನು ಮುಟ್ಟಿಸಬೇಕಾಗಿದೆ. ಹೊಟ್ಟೆಗಿಲ್ಲದೆ ಬಳಲುತ್ತಿರುವ ಭಾರತದ ಬಡ ಪ್ರಜೆಗಳು ಈ ಅಪಾರವಾದ ಹಣವನ್ನು ಬ್ರಿಟಿಷರಿಗೆ ಅಪರ ಕಷ್ಟಕಾಲದಲ್ಲಿ ಕೊಟ್ಟಿದ್ದಾರೆ ಕೊಟ್ಟದ್ದಾರೆ ಎನ್ನುವದಕ್ಕಿಂತಲೂ ಬ್ರಿಟಿಷರು ತಮಗಿರುವ ಅಧಿಕಾರ ಬಲದಿಂದ ಅದನ್ನು ಪಡೆದರು ಎಂದು ಹೇಳುವದು ಹೆಚ್ಚು ಯೋಗ್ಯವಾಗಬಹುದು, ಲಾರ್ಡ್ ಕೇರ್ಸ್ ಮೊದಲಾದ ಬ್ರಿಟಿಷ ಪ್ರತಿನಿಧಿಗಳು ಬ್ರಿಟನ್ನವು ಈ ಸಾಲವನ್ನು ಪೈಗೆ ಪೈ ಮುಟ್ಟಿಸುವದು ಎಂದು ಹೇಳಿದ್ದರು. ಆದರೆ ಡಾ. ಡಾಲ್ಟನ್ನರು ಈ ಸಾಲವು ಅನ್ಯಾಯದ್ದೂ ಅವ್ಯವಹಾರ್ಯವೂ ಆಗಿದೆಯೆಂದೂ ಅಷ್ಟೊಂದು ಹಣವನ್ನು ತಿರುಗಿ ಮುಟ್ಟಿಸುವದು ಸಾಧ್ಯವಿಲ್ಲವೆಂದೂ, ಸಾಲದ ಹಣವನ್ನು ಕಡಿಮೆ ಮಾಡಬೇಕೆಂದೂ ಕಾಮನ್ಸ್ ಸಭೆಯಲ್ಲಿ ಹೇಳಿದ್ದಾರೆ.

—·—

ಸಿಂಗಾಪುರದಲ್ಲಿ ಸುಭಾಸರ ಸ್ಮಾರಕ

ಸಿಂಗಾಪುರದಲ್ಲಿ ನೇತಾಜಿ ಸುಭಾಸ ಚಂದ್ರರಿಗೊಂದು ಸ್ಮಾರಕವನ್ನು 500000 ಸ್ಟೆರ್ಲಿಂಗ್ ಪೌಂಡ್ಸ್ ಡೊಲರ್ ಖರ್ಚು ಮಾಡಿ ಕಟ್ಟಿಸಬೇಕೆಂದು ಮಲಯದ ಹಿಂದೀಯರು ಯೋಚಿಸಿದ್ದಾರೆ. ಈ ಬಗ್ಗೆ ನಿಧಿ ಸಂಗ್ರಹಿಸುವ ನಿರ್ಣಯವು ಕುವಾಲಾ ಲಂಪರ್‌ದಲ್ಲಿ ಜರಗಿದ ಮಲಯ ಹಿಂದೀಯ ಕಾಂಗ್ರೆಸ್ ಅಧಿವೇಶನದಲ್ಲಿ ಆಗಿದೆ. ಮಾತ್ರವಲ್ಲ ಒಡನೆ 6000 ಡಾಲರ್‌ಗಳು ಸಂಗ್ರಹವಾಗಿದೆ.

——

ರಾಜ್ಯಾಂಗ ಸಭೆಗೆ ಮೈಸೂರು ಭಾಗಿಯಾಗುವುದು ಎಂದು ದಿವಾನ ಸಾಹೇಬರು ಪತ್ರಿಕಾಗೋಷ್ಟಿಯಲ್ಲಿ ಅರುಹಿದ ವಿಷಯ ಸಂಸ್ಥಾನಾದ್ಯಂತ ಆನಂದಗೊಳಿಸಿದೆ. ದಿವಾನರವರ ನಾಯಕತ್ವದಲ್ಲಿ ಮೈಸೂರು ರಾಜ್ಯಾಂಗ ಸಭೆಯನ್ನು ಪ್ರವೇಶಿಸಿ ಮೈಸೂರು ಪ್ರಗತಿ [illegible]ದಲ್ಲಿ ಮುಂದುವರೆಯಲಿ ಎಂದು ಇ[illegible]ವೇ ಹಾರೈಸುತ್ತಿದೆ.

ಭಾರತದ ರಾಜರುಗಳು

ಇಂದೂರು ಮಹಾರಾಜರು

ಶ್ರೀ ಯಶ್ವಂತರಾವರ ವಯಸ್ಸು 30. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಓದಿದ್ದಾಯಿತು, ಚಿಕ್ಕಂದಿನಲ್ಲಿ ಸ್ನೇಹಿತರಿಗೆ ಬಹುಮಾನವಾಗಿ ಕೊಡಲು ಜೇಬುಗಳಲ್ಲಿ ಬಂಗಾರದ ಕೈಗಡಿಯಾರಗಳನ್ನು ಇಟ್ಟುಕೊಂಡು ತಿರುಗುತ್ತಿದ್ದರು. ಇವರ ವಾರ್ಷಿಕ ಆದಾಯ 45 ಲಕ್ಷ. ಭೋಗ ಜೀವನ. 2 ವರೆ ಕೋಟಿ ರೂ. ವೆಚ್ಚ ಮಾಡಿ ಅರಮನೆಯನ್ನು ಕಟ್ಟಿದರು. 195 ಸಾವಿರ ರೂ. ವೆಚ್ಚ ಮಾಡಿ ಒಂದು ರೈಲ್ವೇ ಕೋಚ್ ಕೊಂಡಿರುವರು, ಅದು ಒಂದು ಚಕ್ರಗಳ ಅರಮನೆ

ಬರೋಡಾ ಮಹಾರಾಜರು

ಗಾಯಕವಾಡರು ಪ್ರಸಂಚದಲ್ಲಿಯ ಐಶ್ವರ್ಯವಂತರಲ್ಲಿ ಎಂಟನೆಯವರೆಂದು ಸಿದ್ಧಿ. ಈತನು ವೈಭೋಗದಲ್ಲಿ ವಿಲಾಸದೊಡನೆ ಜೀವಿಸುತ್ತಾನೆ. ಹತ್ತಾರು ವೈಡ್ ಸಿನಿಮಾದವರು ಕೂಡ ಕಲ್ಪಿಸಲಾರದ ಭೋಗವು ಅದು. ಇವರ ಅರಮನೆಯೊಳಗಿನ ದಾರಿಗಳೆಲ್ಲವೂ ರತ್ನ ಖಚಿತಗಳಾಗಿವೆ. ಒಂದು ಕಛೇರಿ ಚಾವಡಿಯಲ್ಲಿ ಮುತ್ತಿನ ಜಮಖಾನೆ ಹಾಸಲ್ಪಟ್ಟಿರುತ್ತದೆ. ಇನ್ನು ಅವರ ವೈಭವವು ಬಹಳವಾಗಿದೆ.

ಮಹಾ ಘನತೆ ವಹಿಸಿದ ಹೈದರಾಬಾದು ನೈಜಾಮರು

ಇವರು ಸೈಫ್ಟಿಕರು. 2600 ಕೋಟಿ ರೂಪಾಯಿಗಳ ಬೆಲೆಯುಳ್ಳ ಆಸ್ತಿಯುಳ್ಳವರು. ಇವರ ಸುತ್ತಮುತ್ತಲೂ ರಾಜಮಂದಿರಗಳಿದ್ದರೂ, ರಾತ್ರಿ ಹೊತ್ತು ತನ್ನ ಮುದ್ದಾದ ಆಡಿನ ಮರಿಯನ್ನು ಪಕ್ಕದಲ್ಲಿಟ್ಟುಕೊಂಡು ಜಗಲಿಯ(ವರಾಂಡ) ಮೇಲೆ ಮಲಗಿಕೊಳ್ಳುತ್ತಾರೆ. ಇವರು ಬಹು ಬುದ್ಧಿಶಾಲಿ. ಧನ ಸಂಚಯವನ್ನು ಮಾಡುತ್ತಲೇ ಇರುತ್ತಾರೆ. ಒರ್ಟಾಪನೆಯನ್ನು ಬಟ್ಟೆಯನ್ನು ಧರಿಸಿ ಒಂದು ಹಳೇ ಫೋರ್ಡ್ ಕಾರಿನಲ್ಲಿ ರಸ್ತೆಗಳಲ್ಲಿ ಸುತ್ತುತ್ತಾರೆ.

ಜಮ್ಮೂ ಕಾಶ್ಮೀರ ಮಹಾರಾಜರು ಮೊದಲಾದವರು

ವರ್ಷಕ್ಕೆ ಆದಾಯ 260 ಲಕ್ಷ ರೂ ಈ ಕಾಶ್ಮೀರದ ರಾಜರಿಗೆ.

ವರ್ಷಕ್ಕೆ ರೂ. 60 ಆದಾಯವಿರುವ ಹಳ್ಳಿಗಳ ರಾಜರೂ ಈ ದೇಶದಲ್ಲಿದ್ದಾರೆ.

ರಾಜರೆಲ್ಲರಿಗೂ ಆವ್ಯಶಶಿಲೆಯ ಭವನಗಳಿಲ್ಲ. ಕೆಲವರಿಗೆ ವರ್ಣಿಸಗೋಡೆಗಳ ಸಾಧಾರಣ ಗುಡಿಸಲುಗಳೇ ಅರಮನೆಗಳಾಗಿವೆ,

ವಾರ್ತಾ ಪತ್ರಿಕೆಗಳು

1 ಪ್ಯಾರಿಸ್ಸಿನಲ್ಲಿ ರಬ್ಬರ್ ಕಾಗದದ ಮೇಲೆ ವರ್ತಮಾನ ಪತ್ರಿಕೆಯನ್ನು ಹಿಂದೆ ಹೊರಡಿಸುತ್ತಿದ್ದರು. ಕಾರಣ ಸ್ನಾನಮಾಡುವ ತೊಟ್ಟಿಯಲ್ಲಿ ಕೂತು ಕೊಂಡೇ ಓದಲಿಕ್ಕಾಗಿ.

2 ಮತ್ತೊಂದು ಪತ್ರಿಕೆಯು ಪ್ಯಾರಿಸ್ಸಿನಲ್ಲಿ ವಾಟರ್‌ಪ್ರೂಫ್ ಕಾಗದದಲ್ಲಿ ಪ್ರಿಂಟು ಮಾಡಲ್ಪಡುತ್ತಿತ್ತು.

3 ಪ್ಯಾರಿಸ್ಸಿನಲ್ಲಿಯೇ ಒಂದು ಪತ್ರಿಕೆಯು ಕೇವಲ ಪದ್ಯ ರೂಪದಲ್ಲಿ ಹೊರಡಿಸಲ್ಪಡುತ್ತಿತ್ತು. 15 ವರ್ಷಗಳಲ್ಲಿ ಅದು ಪ್ಯಾರಿಸ್ಸು ಸಮಾಚಾರವನ್ನೂ 325000 ಪದ್ಯಗಳಲ್ಲಿ ತಿಳಿಸಿತ್ತು.

4 ಮತ್ತೊಂದು ಪ್ಯಾರಿಸ್ಸು ಪತ್ರಿಕೆಯ ಹೆಸರು ' ಕಠವಸ್ತ್ರ ' ಓದಿದ ಮೇಲೆ ಕರವಸ್ತ್ರದಂತೆ ಉಪಯೋಗಿಸಬಹುದಾಗಿತ್ತು.

5 ಇಂಗ್ಲೆಂಡಿನಲ್ಲಿ ಪಿಯರ್ಸ್ ವೀಕ್ಲಿ ಪತ್ರಿಕೆಯನ್ನು ಇತ್ತೀಚ್ಚೆಯಂಜಾ ಕಾಲದಲ್ಲಿ ಯೂಕಿ ಲೆಪ್ಟಸ್ ಎಣ್ಣೆಯಲ್ಲಿ ಕಾಗದಗಳನ್ನು ನೆನೆಸಿ ಪ್ರಿಂಟು ಮಾಡುತ್ತಿದ್ದರು. ಗ್ರೀನಾಕ್ ನ್ಯೂಸ್ ಕ್ರಾನಿಕ್ ಎಂಬ ಪತ್ರಿಕೆಯು ಬಟ್ಟೆಯ ಮೇಲೆ ಪ್ರಿಂಟು ಮಾಡಲ್ಪಡುತ್ತಿತ್ತು.

6 ಡೈಲಿ ಪಿಲಟ್ ಎನ್ನುವದು ಪ್ರಪಂಚದಲ್ಲಿ ಇಂದಿನ ಕಾಲದ ಅತಿ ಸಣ್ಣ ಪತ್ರಿಕೆ. ಕಾಗದದ ಒಂದೇ ಕಡೆಯಲ್ಲಿ ಪ್ರಿಂಟು ಮಾಡಲ್ಪಡುತ್ತಿತ್ತು. ಉದ್ದ 18 ಅಂಗುಲ. ಬಿಮ್ಮಿ ಬಗಲ್ ಎಂಬ ಪತ್ರಿಕೆಯ ಉದ್ದ ೪॥ ಅಂಗುಲ. ಅಗಲ ಮೂರು ಎಂಟನೆ ಒಂದು ಅಂಗುಲ. ಕ್ವಾಡ್ರುವಲ್ ಕಾಂಪ್ಲಿಮೆಷ್ ಎಂಬ ಪತ್ರಿಕೆಯ ಉದ್ದ ೮॥ ಅಡಿ ಅಗಲ 6 ಅಡಿ, ಇದು ಶತಮಾನಕ್ಕೆ ಒಂದು ಬಾರಿ ಹೊರಡುತ್ತದೆ.

——

ಹೈದರಾಬಾದು ಜೂ 19— ಹೈದರಾಬಾದು ಬ್ರಿಟಿಷರೊಂದಿಗೆ ಮಾಡಿಕೊಂಡಿರುವ ಒಪ್ಪಂದದಲ್ಲಿ ಅದರ ಸ್ವಾತಂತ್ರ್ಯವು ಐತಿಹಾಸಿಕವಾದ ದೆಂದೂ, ಅದು ಬ್ರಿಟಿಷರು ಗೆದ್ದಿದ್ದಲ್ಲವೆಂದೂ, ಹೈದರಾಬಾದು ಯಾವಾಗಲೂ ಸ್ವತಂತ್ರವಾಗಿಯೇ ಇರುವುದೆಂದೂ, ಬ್ರಿಟಿಷರ ಅಧೀನರಾಜ್ಯವಲ್ಲವೆಂದೂ, ಅದರ ಸ್ವಾತಂತ್ರ್ಯ ರಕ್ಷಣೆಗಳು ಅವಶ್ಯಕವಿದ್ದರೆ ಅಲ್ಲಿಯ ಮುಸ್ಲಿಂರು ತಮ್ಮ ಸಜ್ಜಿತರಾಗಿ ಎದುರಿಸಲು ಸಿದ್ಧರೆಂದೂ ಮಜ್ಲಿಸ್ ತಂಫದ ಡೈರೆಕ್ಟ್ ಆಕ್ಷನ್ ಕಮಿಟಿಯ ಅಧ್ಯಕ್ಷರಾದ ಮಿ॥ ಅಬ್ದುರೂಫರು ನುಡಿದಿದ್ದಾರೆ.

ತಾ॥ 23-6-47 ॥ಶ್ರೀ॥ ನಂ. 41

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಪ್ರಬೋಧದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ– ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾರತವಿಶಾರದ
ಸಂಘದ ಕಾರ್ಯದರ್ಶಿ, ದೂರ್ವಾಸಪುರಂ, ಶಿವಮೊಗ್ಗಾ ಜಿಲ್ಲಾ

ಉಪಾಸ್ಯ ನಿರ್ಣಯ

——

(ಶ್ರೀ ಸ್ವಾಮಿ ಕರಸಾತ್ರೀಜೀ)

(16–6–47 ರಿಂದ ಮುಂದುವರಿದುದು)

'ಯೋಗವಾಸಿಷ್ಠ' ದ ವಿಪಶ್ಚಿದಾಖ್ಯಾನದಲ್ಲಿ. ಮೃಗ ರೂಪದಿಂದ ಒಂದ ವಿಪಶ್ಚಿತುನನ್ನು ನೋಡಿ ಶ್ರೀ ವಸಿಷ್ಠರು, ಎಂದಾದರು ಯಾವವ್ಯಕ್ತಿಗೆ ಯಾವ ಸ್ವರೂಪ ಉಪಾಸ್ಯವಾಗಿರಬಹುದೋ ಆದರ ಮೂಲಕವಾಗಿಯೆ ಆ ವ್ಯಕ್ತಿಯ ಕಲ್ಯಾಣವು ಸುಗಮವಾಗುವುದು – ಎಂದು ವಿಚಾರಮಾಡಿ, ಕೋಟ್ಯಂತರ ಜನ್ಮದ ಹಿಂದೆ ಅಗ್ನಿಯ ಉಪಾಸನೆ ಮಾಡಿರುವ ಮೃಗ ರೂಪೀ ವಿಪಶ್ಚಿತನೆದುರಿನಲ್ಲಿ ತಮ್ಮ ಯೋಗಬಲದಿಂದ ಅಗ್ನಿಯನ್ನು ಪ್ರಾಕಟ್ಯಗೊಳಿಸಿದರು. ಅಗ್ನಿಯ ದರ್ಶನವಾಗುತ್ತಲೇ ಆ ಮೃಗವು, ಅಗ್ನಿಯೊಂದಿಗೆ ಆದಕ್ಕಾವುದೋ ಬಹಳ ಹಿಂದಿನ ಸಂಬಂಧವಿದೆಯೋ ಎಂಬಂತಹ ಸ್ನೇಹಭರಿತವಾದ ದೃಷ್ಟಿಯಿಂದ ಅಗ್ನಿಯನ್ನು ನೋಡ ತೊಡಗಿತು. ಅನಂತರ ವಸಿಷ್ಠರ ಕೃಪೆಯಿಂದ ಅದಕ್ಕೆ ಕಲ್ಯಾಣವಾಯಿತು. ಇಂಲಿ, ಪ್ರಕೃತದಲ್ಲಿ ಹೇಳಬೇಕಾದುದು ಇಷ್ಟೇ – ಸ್ವಪ್ನ ದರ್ಶನ ಮತ್ತು ಮೂಹಾತ್ಮಕೃಶ್ಯವಣ ಮುಂತಾದುದರಿಂದ ಚಿತ್ತದ ಆಕರ್ಷಣವನ್ನು ನೋಡಿ ತನ್ನ ಇಷ್ಟ ದೇವತೆಯ ನಿರ್ಣಯವನ್ನು ಮಾಡಿಕೊಳ್ಳಬೇಕು. ಆನೇಕ ಜನ್ಮದ ಸಾಧನಗಳಿಂದ ಜೀವನ ಉಪಾಸನೆಯಲ್ಲಿ ಉನ್ನತಿಯಾಗುವುದೆಂಬುದು ಸ್ಪಷ್ಟವಾಗಿದೆ. ಜನ್ಮಜನ್ಮದಲ್ಲಿ ಮಾರ್ಗ ಪರಿವರ್ತನ ಮಾಡುವುದರಿಂದ ಯಥೇಷ್ಟ ಲಾಭವು ಸಂಭವವಲ್ಲ. ಆದ-ದರಿಂದ ಪೂರ್ವದ ಉಪಾಸನೆಯು ಸಂಸ್ಕಾರದ ಜ್ಞಾನವಂತು ಆದೇ ಉಪಾಸನೆಯಲ್ಲಿ ಪ್ರವೃತ್ತರಾಗಬೇಕು. ಪಿತೃ ಪಿತಾಮಹಾ ಪರಂಪರೆಯ ಉಪಾಸನೆಗಳಿಗನುಸಾರವಾಗಿಯೇ ಪ್ರಾಣಿಯು ಉಪಾಸನೆ ಮಾಡಬೇಕು. ಇಂದಿನ ಜನ್ಮದೆ ಸತ್ಪ್ರವೃತ್ತಿ ವತ್ತು ದುಷ್ಪ್ರ ವೃತ್ತಿಯಲ್ಲಿ ಹಿಂದಿನ ಜನ್ಮಗಳ ಸಂಸ್ಕಾರಗಳೂ ಬೇಕಾಗುತ್ತವೆ. ಒಂದು ವೇಳೆ ಒಬ್ಬನಿಗೆ ದುರ್ದೈವ ವಶದಿಂದ ದುರಾಚಾರ – ದುರ್ವಿಚಾರಗಳಿಗೇ ಉತ್ತೇಜನೆ ದೊರೆಯುವಂತಹ ದೇಶಕಾಲಗಳಲ್ಲಿ ಆಂತಹ ಮಾತಾಪಿತೃಗಳ, ಗುರುಜನರ ಮತ್ತು ಗ್ರಂಥಗಳ ಸಂಸರ್ಗವುಂಟಾದರೆ ಆ ವ್ಯಕ್ತಿಗೆ ದುಸಂಗ ಮತ್ತು ಅಸದ್ವಿಚಾರವುಳ್ಳ ಶಾಸ್ತ್ರಗಳನ್ನು ಬಿಟ್ಟು ಸತ್ಪುರುಷ ಸಂಗ ಸಚ್ಛಾಸ್ತ್ರದ ಅಭ್ಯಾಸ ಮತ್ತು ಶತದನುಸಾರವಾದ ಸದಾಚಾರ, ಸದ್ವಿಚಾರಗಳ ಸಂಪಾದನೆಯಲ್ಲಿ ಶುಂಬಾ ಪ್ರಯಾಸ ವುಂಟಾಗುತ್ತದೆ. ಯಾರಿಗೆ ಪೂರ್ವ ಸಂಸ್ಕಾರಕ್ಕನುಸಾರವಾಗಿ ಶುದ್ಧವಿಚಾರವುಳ್ಳ ದೇಶ ಕಾಲ ಮತ್ತು ಮಾತಾಪಿತೃ ಗುರು ಜನರ ಸಂಯೋಗವು ಪ್ರಾಪ್ತವಾಗಿ ಸಚ್ಛಾಸ್ತ್ರಗಳೇ ಅಧ್ಯಯನ ಮಾಡಲಿಕ್ಕೆ ದೊರೆಯುವುವೊ, ಅತನಿಗೆ ಸದಾಚಾರ ಸದ್ವಿಚಾರಗಳ ವೃದ್ಧಿಗೆ ಶುಂಬಾ ಸಹಾಯ ದೊರಕುವುದು. ಆದುದರಿಂದಲೇ ಪ್ರಾಯಃ ಸನ್ಮಾರ್ಗಸ್ಥನಾದ ಸದಾಚಾರಿಗೆ ಅವನ ಬಾವನೆ ಮತ್ತು ಉಪಾಸನೆಗೆ ಅನುಸಾರವಾಗಿಯೇ ಸಮೀಚೀನವಾದ ದೇಶ ಕಾಲ ಮತ್ತು ಮಾತಾಪಿತೃ, ಹಾಗೂ ಶಾಸ್ತ್ರಗಳ ಸಂಸರ್ಗವು ಸಿಕ್ಕುತ್ತದೆ. ಇದೇ ವಿಷಯವನ್ನು ಶ್ರೀ ಭಗವಂತನು 'ಶುಚೀನಾಂ ಶ್ರೀಮತಾಂ ಗೇ ಹೇ' 'ಅಥವಾ ಯೋಗಿನಾಮೇವ ಕುಲೇ ಭವತಿ ಧೀಮತಾಂ' 'ಪೂರ್ವಾಭ್ಯಾಸೇನ ತೌಂತೇಯ ಹ್ರಿಯತೆ ಹ್ಯವಶೋಽಪಿ ಸಃ' ಇತ್ಯಾದಿ ವಚನಗಳಿಂದ ಇಂಗಿತಗೊಳಿಸಿರುವನು. ಆದ-ದರಿಂದಲೇ ನಮ್ಮ ಉಪಾಸನೆಗೆ ಅನುಕೂಲವೇ ಆದ ಕುಲದಲ್ಲಿ ನಮ್ಮ ಜನ್ಮವುಂಟಾಗುವುದು ಬಹಳ ಸಂಭವವಿದೆ. ಆದ-ದರಿಂದ ನಾವು ಮಾತಾಪಿತೃ ಗುರುಜನರಿಗನುಸಾರವಾಗಿಯೇ ಉಪಾಸನೆ ಮಾಡಬೇಕು.

ಹೀಗೂ ಈ ವಿಷಯವನ್ನರಿಯುವುದರಲ್ಲಿ ಸುಗಮತೆಯಾಗುವುದು. ಒಬ್ಬ ಪುರುಷನು ಒಂದಾನೊಂದು ಅಪರಿಚಿತ ಮಾರ್ಗದಿಂದ ಯಾವುದೋ ಅಭೀಷ್ಟ ದೇಶಕ್ಕೆ ಹೋಗುತ್ತಿದ್ದರೆ, ಮುಂದೆ ಹೋಗಿ ಆತನಿಗೆ ಮೂರು ಮಾರ್ಗಗಳು ಕಾಣಿಸಿದರೆ ಮತ್ತು ಮೂರರಲ್ಲಿಯೂ ಕೆಲವರು ನಡೆಯುತ್ತಿದ್ದರೆ, ಪ್ರಶ್ನಿಸಿದಲ್ಲಿ ಎಲ್ಲರೂ ತಮ್ಮ ಮಾರ್ಗವನ್ನೇ ನಿರ್ವಿಘ್ನವಾದ್ದೆಂದು ತಿಳಿಸಿದರೆ, ಸಂಗಡಲೇ ಬೇರೆ ಪಥಾರ್ಗಗಳನ್ನು ನಾನಾ ಪ್ರಕಾರದ ಸಿಂಹ ವ್ಯಾಘ್ರ ಸರ್ಪ ವೃಶ್ಚಿಕ ಕಂಟಕಾಕೀರ್ಣಗರ್ತಗಳಿಂದ ಉಪದ್ರವವುಳ್ಳದೆಂದು ಹೇಳಿದರೆ, ಇಂತಹ ಸ್ಥಿತಿಯಲ್ಲಿ ಒಂದು ವೇಳೆ ಹೋಗುವುದು ಅವಶ್ಯಕವೇ ಆಗಿದ್ದರೆ, ಆ ಪ್ರಾಣಿಯು ಯಾವ ಮಾರ್ಗವನ್ನು ಅವಲಂಬಿಸುವನು? ಬುದ್ಧಿಯುಳ್ಳವದಾದರೋ ಆ ಮಾರ್ಗಾನುಯಾಯಿಗಳೊಳಗೆ ಯಾರು ನಮ್ಮ ರಾಷ್ಟ್ರ ಪ್ರಾಂತ್ಯ ನಗರ ಮತ್ತು ಗ್ರಾಮದವರಾಗಿರಬಹುದೋ ಇಲ್ಲವೆ ನಮ್ಮ ಕುಟುಂಬಿಗಳೊಳಗಾಗಿರಬಹುದೋ ಅವರ ಮೇಲೆಯೇ ಹೆಚ್ಚಿನ ವಿಶ್ವಾಸವಿಡಬಹುದು – ಎಂದೇ ಹೇಳುವರು. ಯಾವಾಗ ಬಹಳ ವಿಶಿಷ್ಟ ಅನುಭವಗಳಿಂದ ಆ ಮಾರ್ಗವು ದೂಷಿತವೆಂಬುದೂ ಮಾರ್ಗಾಂತರವು ನಿರ್ವಘ್ನವಾದುದೆಂಬುದೂ ನಿಶ್ಚಿತವಾಗಿ ಹೋಗಿದೆಯೋ ಆಗ ಯಾವುದಾದರಿನ್ನೊಂದು ಮಾರ್ಗವನ್ನವಲಂಬಿಸಬೇಕೆಂಬ ಮಾತು ಪ್ರತ್ಯೇಕ.

ಇದಕ್ಕಾಗಿಯೂ ನಮ್ಮ ಪಿತೃಪಿತಾಮಹ ಪರಂಪರೆಯಲ್ಲಿ ಯಾವ ಉಪಾಸನೆಯೂ ಆಚಾರವೂ ಶಾಸ್ತ್ರವೂ ಮಾನ್ಯವಾಗಿಯೆಯೊ, ಅವೇ ಉಚಿತವಾದುವು. ವೇದವೂ ಕೂಡ 'ಕಿಂ ಸ್ವಿತ್ ಪುತ್ರೇಭ್ಯಃ ಪಿತರಾವುಪಾವತುಃ' ಎಂಬ ವಾಕ್ಯದಿಂದ ಪರಂಪರಾಗತವಾದ ಆಚಾರವನ್ನು ಸಮರ್ಥಿಸಿದೆ. ತಾತ್ಪರ್ಯವೇನೆಂದರೆ ಪುತ್ರನ ಹಿತದ ಸಲುವಾಗಿ ಮಾತ್ರೆ, ಪಿತೃ ಅಥವಾ ಪಿತಾಮಹ ಪ್ರಭೃತಿಗಳು ಯಾವ ವ್ರತದ ಪಾಲನೆಯನ್ನು ಇಲ್ಲವೆ ಯಾವ ದೇವತೆಯ ಉಪಾಸನೆಯನ್ನು ಮಾಡಿರಬಹುದೋ, ಆ ಪುತ್ರನಿಗೆ ಆದೇ ವ್ರತ ಅಥವಾ ದೇವತೆಯನ್ನವಲಂಬಿಸುವುದು ಉಚಿತವಾಗಿದೆ

ಅಂತ್ಯಜ ದೇವಾಲಯ ಪ್ರವೇಶ ಪರಿಣಾಮ

ಶ್ರೀರಂಗ ದೇವಾಲಯವು ತಿರುಚನಾಪಳ್ಳಿಯಲ್ಲಿ ಉತ್ತರ ದಕ್ಷಿಣ ಕಾವೇರೀ ದ್ವೀಪದ ಮಧ್ಯದಲ್ಲಿ ಶ್ರೀರಂಗಂ ಎಂಬ ನಗರಿಯಲ್ಲಿದೆ. ಐತಿಹಾಸಿಕ ಹಾಗೂ ಪೌರಾಣೀಕ ದೃಷ್ಟಿಯಲ್ಲಿ ಈ ದೇವಾಲಯವು ಹಿಂದೂಸ್ಥಾನದಲ್ಲಿ ಅತೀವ ಪುರಾತನವೂ ಶ್ರೇಷ್ಠವೂ ಆಗಿದೆ. ಈ ವಿಶಾಲ ದೇವಾಲಯದಲ್ಲಿ ಶ್ರೀರಂಗನಾಥನು ತ್ರೇತಾಯುಗದಿಂದತೇ ಅನಂತ ಜೀವರ ಕಲ್ಯಾಣಾರ್ಥವಾಗಿ ನೆಲೆಸಿರುವನು. ಶ್ರೀರಂಗನಾಥ ದೇವರ ಈ ದಿವ್ಯ ಮಂಗಳ ವಿಗ್ರಹದ ಕುರಿತು ಸಮಸ್ತ ಆಚಾರ್ಯ ಆಳ್ವಾರುಗಳ ಮಂಗಳಾನುಶಾಸನಗಳಿವೆ.

ಈ ಶ್ರೀರಂಗ ದೇವಾಲಯದೊಳಗೆ ಅಂತ್ಯಜರನ್ನು ಪ್ರವಿಷ್ಟಗೊಳಿಸುವ ದುಷ್ಟ ಪ್ರಯತ್ನವು ಹಲವು ವರ್ಷಗಳಿಂದ ನಡೆಯುತ್ತಿದ್ದಿತು, ಈಗಿನ ಕಾಂಗ್ರೆಸ್ ಸರಕಾರದ ಅಧಿಪತ್ಯದಲ್ಲಿ ಈ ಪ್ರಯತ್ನಕ್ಕೆ ವಿಶೇಷ ಬಲವು ದೊರೆಯಿತು. ಭಾರತದ ಅನೇಕ ಚಿಕ್ಕ ದೊಡ್ಡ ದೇವಾಲಯಗಳಲ್ಲಿ ಕಪಟ ತಂತ್ರದಿಂದ ಅಂತ್ಯಜರನ್ನು ಪ್ರವೇಶಗೊಳಿಸಯಾಗಿದ್ದಿತು. ದಕ್ಷಿಣ ಭಾರತದ ಸರ್ವ ಪ್ರಧಾನ ದೇವಾಲಯವಾದುದರಿಂದ ಎಲ್ಲಾ ಸುಧಾರಕರ ದೃಷ್ಟಿಯು ಈ ದೇವಾಲಯದ ಮೇಲೆ ಬಿದ್ದಿತು. ಆದರೆ ಸನಾತನಿಗಳ ಪ್ರಾಬಲ್ಯವಿದ್ದ ಕಾರಣ ಅವರ ಬೇಳೆ ಬೇಯಲಾಗಿಲ್ಲ. ಸನಾತನಧರ್ಮಾಭಿಮಾನಿ ಹಿಂದೂ ಮಹಿಳೆಯರು ವಿಶೇಷ ರೂಪದಿಂದ ಇದನ್ನು ವಿರೋಧಿಸಿದುದರಿಂದ ಸುಧಾರಕರ ಉತ್ಸಾಹವು ಶಿಥಿಲವಾಯಿತು.

ಆಮೇಲೆ ಕಾಂಗ್ರೆಸ್ ಮುಂದಾಳುಗಳು ಸನಾತನಿಗಳಲ್ಲಿ ಒಡಕು ಹುಟ್ಟಿಸುವ ಕುತಂತ್ರವನ್ನು ರಚಿಸಿ ಶ್ರೀರಂಗಕ್ಷೇತ್ರದಲ್ಲಿ ಪೌಟು ಶೆಗೆಯುವ ಸಿದ್ಧತೆ ಮಾಡಿದರು. ಪೌಟಿನ ಮೂಲಕ ಪ್ರವೇಶದ ಪಕ್ಷದಲ್ಲಿ ಬಹುಮತವನ್ನು ತೋರಿಸಿ ಮದರಾಸು ಸರಕಾರದಿಂದ ಸಮ್ಮತಿಯನ್ನು ಪಡೆಯುವ ಆಶೆಯಿಂದ ಈ ಕಾರ್ಯವನ್ನಾರಂಭಿಸಿದರು. ಕೃತ್ರಿಮ ರಾಷ್ಟ್ರೀಯತೆಯ ಪ್ರಲೋಭನಕ್ಕೊಳಗಾದ ಜನರು ಅವರ ಪಂಗಡವಲ್ಲಿ ಸೇರಿಯೇ ಪಟ್ಟಿದ್ದರು. ದೇವಸ್ಥಾನದ ಉದ್ಯೋಗಸ್ಥರಿಗೆ ಭಯ ಹಾಗೂ ಲೋಭವನ್ನು ತೋರಿಸಿ ಸೇರಿಸಿಕೊಳ್ಳುವ ಉದ್ಯೋಗ ನಡೆಸಲಾಯಿತು ಹಾಗೂ ಶ್ರೀರಂಗನಾಥ ದೇವರ ಅರ್ಚಕರಾಗಿದ್ದ ವಿಶೇಷ ಉಚ್ಚ ಪದಸ್ಥರಾದ ೨೧ ಜನ

(ಹಿಂದಿನ ಕಾಲಂ ನೋಡಿ)

ರೊಳಗೆ ೩ ಜನರನ್ನು ಬಿಟ್ಟು ಉಳಿದೆಲ್ಲರೂ ದೇವಾಲಯ ಪ್ರವೇಶದ ಪಕ್ಷವಾಗಿ ಹಸ್ತಾಕ್ಷರ ಹಾಕಿದಿಟ್ಟರು. ಅನ್ಯಾನ್ಯ ಸರಕಾರಿ ಉದ್ಯೋಗಸ್ಥರಾದರೋ ಮುಂಚಿನಿಂದಲೇ ಆ ಪಕ್ಷದಲ್ಲಿದ್ದರು. ಈ ರೀತಿ ಮತಗಣನೆಯ ಆಧಾರದ ಮೇಲೆ ಕಾಂಗ್ರೆಸ್ಸಿಗೆ ಬಹುಮತ ಸಿಕ್ಕಿಹೋಯಿತು. ಹಾಗೂ ತಾ॥ ೨೬–೧–೪೭ ನೇ ಬೆಳಿಗ್ಗೆ ೮ ರಿಂದ ೧೨ ಗಂಟೆಯೊಳಗೆ ಒಳಗೆ ಪ್ರವೇಶಿಸುವ ಸಮಯವನ್ನು ನಿಶ್ಚಯಿಸಿ ನೋಟೀಸುಗಳನ್ನು ಹಂಚಲಾಯಿತು. ಸಾವಿರಾರು ಸಂಖ್ಯೆಯಲ್ಲಿ ಹೊರಗಿನಿಂದಲೂ ಅಂತ್ಯಜರನ್ನು ಕರೆಯಿಸಲಾಗಿದ್ದಿತು. ಅವರಿಗೆ ಉಡುವ ತೊಡುವ ಬಟ್ಟೆಗಳನ್ನು ಕಾಂಗ್ರೆಸಿಗರು ಏರ್ಪಡಿಸಿದ್ದರು. [ಸಶೇಷ

ರೇಷನಿಂಗ್ ಆಫೀಸ್, ಮೈಸೂರು.

No. R I - 410 / 46

ಪ್ರಸಿದ್ಧ ಪತ್ರಿಕೆ

ಇದರಿಂದ ಮೈಸೂರು ಸಿಟಿಯಲ್ಲಿರುವ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—

ಇದೇ 1947 ನೇ ಜೂಕ್ ಮಾಹೆ 25 ನೇ ತಾರೀಖು ಲಾಗಾಯ್ತು ಹೊಸ ರೇಷ್ಕ್ ಕಾರ್ಡುಗಳನ್ನು, ಆವರವರ ಡಿಪೋಗಳಲ್ಲಿ ಹಳೇ ಕಾರ್ಡುಗಳನ್ನು ವಾಪ್ಸು ಮಾಡಿ ಪಡೆಯತಕ್ಕದ್ದು. ಈ ಹೊಸ ಕಾರ್ಡುಗಳು 1947 ನೇ ಜುಲೈ ಮಾಹೆ 1 ನೇ ತಾರೀಖಿನಿಂದ ಚಾಲ್ತಿಗೆ ಬರುವುದು.

(ಸಹಿ) ಅಬ್ದುಲ್ ರಜಾಕ್
ರೇಷನಿಂಗ್ ಆಫೀಸರ್
ಮೈಸೂರು ಸಿಟಿ

ಸಾಮಾಜಿಕ

ಅಕ್ಕರ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

For Quality Printing

L. N. Press

Sriramp et, MYSORE

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--12--0

ಗ್ರೈಪ್ ಸಿರಪ್

ಟ್ರೇಡ್ ITL ಮಾರ್ಕ್

ಎಳೆಯ ಮಕ್ಕಳ ಜೀರ್ಣಶಕ್ತಿಯನ್ನು ಬಲಪಡಿಸುವ ಷರಬತ್ತು. ಗ್ರೈಪ್ ಸಿರಪ್ ರುಚಿ ಸಹಿಯಾಗಿಯೂ ಮತ್ತು ಆಹ್ಲಾದ ಉಂಟುಮಾಡುವುದಾಗಿಯೂ ಇರುವುದರಿಂದ ಮಕ್ಕಳ ಸೇವನೆಗೆ ಅನುಕೂಲವಾದುದು.

ಪ್ರತಿಯೊಬ್ಬ ತಾಯಿಯೂ ಮನೆಯಲ್ಲಿ ಈ ಷರಬತ್ತಿನ ಸೀಸೆ ಒಂದನ್ನು ಯಾವಾಗಲೂ ಕೈಗಾವಲಾಗಿಟ್ಟಿರುವುದು ಅತ್ಯವಶ್ಯಕ.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd..

Malleswaram P. O. Bangalore

At Opera 10th Glorious Week

RAJAKUMARI

ಟಿ. ಎಸ್. ಬಾಲಯ್ಯ, ತವಮಣಿದೇವಿ, ಮಾಲತಿ ರಾಮಚಂದ್ರ ನಟಿಸಿರುವ

ರಾಜಕುಮಾರಿ

(ತಮಿಳು)

Edited, Printed and Publishedby M. S Krishna Rao at the Satyvadi Press Chamara Agrahar, Mysore.

Public Auction

One Magirus Lorry of Diesel Engine, Four Cylinders 32 H, P. running condition, capable of carrying heavy loads upto 4 tons, will be sold by public auction on 30 th June 1947 at 4 p.m. in the Municipal Offices, Mysore

For particulars please apply to the President, City Municipal Council, Mysore.

R. Ramachandra Rao Bhombore
President
City Municipal Council, Mysore

ಹರಾಜು

ಡಿಸೆಲ್ ಇಂಜಿನ್, ಫೋರ್ ಸಿಲಿಂಡರ್‌ಗಳುಳ್ಳ ಮೆಜಿರಿಸ್ ಲಾರಿಯನ್ನು ಮುನಿಸಿಪಲ್ ಆಫೀಸ್ ಕಾಂಪೌಂಡಿನಲ್ಲಿ ತಾ || 30-6-47 ನೇ ಸಾಯಂಕಾಲ ೪ ಗಂಟೆಗೆ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಬಂದು ನೋಡಿ ಛಡಸವಾಲು ಮೂಲಕ ತೆಗೆದುಕೊಳ್ಳಬಹುದು.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು, ಆಥವಾ ರೂಬರೂಬ್ ಹಾಜರಾಗಿ ತಿಳಿದುಕೊಳ್ಳಬಹುದು,

(ಸಹಿ) ಆರ್. ರಾಮಚಂದ್ರರಾವ್ ಭೊಂಬೋರೆ
ಪ್ರೆಸಿಡೆಂಟ್
ಸಿಟಿ ಮುನಿಸಿಪಲ್ ಕೌನ್ಸಿಲ್, ಮೈಸೂರು

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಆರಿಸಿ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ಶಿಪಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.